# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ, ಕರ್ನಾಟಕ-೫೮೩ ೨೭೬

**ಪ್ರೊ. ವಿಜಯ್ ಪೂಣಚ್ಚ ತಂಬಂಡ**
**ಕುಲಸಚಿವರು**


ಸಂಖ್ಯೆ:ಕವಿಹಂ:ಕುಸ:ಪಿಎಚ್.ಡಿಕೋವ:೪ನೇಹಂತ:ಸುತ್ತೋಲೆ:೨೦೨೩-೨೪ ದಿನಾಂಕ:೨೦.೦೨.೨೦೨೪

## ಸುತ್ತೋಲೆ

**ವಿಷಯ :** ೨೦೨೨-೨೩ನೇ ಸಾಲಿನ ಪಿಎಚ್.ಡಿ ವಿದ್ಯಾರ್ಥಿಗಳ ೪ನೇ ಹಂತದ ಕೋರ್ಸ್‌ವರ್ಕ್ ವೇಳಾಪಟ್ಟಿ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ:೦೫, ದಿನಾಂಕ:೨೦.೦೨.೨೦೨೪

---

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯದ ೨೦೨೨-೨೩ನೇ ಸಾಲಿನ ತಾತ್ಕಾಲಿಕ ನೋಂದಣಿಯಾದ ಪಿಎಚ್.ಡಿ ವಿದ್ಯಾರ್ಥಿಗಳಿಗೆ ನಾಲ್ಕು ಹಂತದ ಪಿಎಚ್.ಡಿ ಕೋರ್ಸ್‌ವರ್ಕ್ ನಡೆಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖಿತ ಕಂಡಿಕೆಯನ್ವಯ ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ ನಾಲ್ಕನೇ ಹಂತದ ಕೋರ್ಸ್‌ವರ್ಕ್ ವೇಳಾಪಟ್ಟಿಯ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. ಈ ಮಾಹಿತಿಯನ್ನು ಸಂಬಂಧಿಸಿದ ವಿಭಾಗಗಳ/ ವಿಸ್ತರಣಾ ಕೇಂದ್ರ/ಮಾನ್ಯತಾ ಕೇಂದ್ರಗಳ ಮುಖ್ಯಸ್ಥರುಗಳು/ಸಂಯೋಜನಾಧಿಕಾರಿಗಳು ಸಂಬಂಧಿಸಿದ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ತಿಳಿಸಲು ಹಾಗೂ ಸೂಚನಾ ಫಲಕಕ್ಕೆ ಆಳವಡಿಸಲು ಸೂಚಿಸಲಾಗಿದೆ. ವೇಳಾಪಟ್ಟಿ ಈ ಕೆಳಕಂಡಂತಿದೆ.

| ಕ್ರಸಂ. | ಹಂತ | ದಿನಾಂಕ |
|---|---|---|
| ೦೧ | ನಾಲ್ಕನೇ ಹಂತ | ೨೬.೦೨.೨೦೨೪ ರಿಂದ ೦೨.೦೩.೨೦೨೪ |

ದಿನಾಂಕ: ೨೬.೦೨.೨೦೨೪ರಂದು ೪ನೇ ಹಂತದ ಕೋರ್ಸ್‌ವರ್ಕ್ ಮತ್ತು ಉಪನ್ಯಾಸ ಉದ್ಘಾಟನೆಯನ್ನು ಮಂಟಪ ಸಭಾಂಗಣದಲ್ಲಿ ಬೆಳಿಗ್ಗೆ:೧೧.೦೦ ಗಂಟೆಗೆ ಆಯೋಜಿಸಲಾಗುವುದು.

೪ನೇ ಹಂತದ ಕೋರ್ಸ್‌ವರ್ಕ್‌ನಲ್ಲಿ ೪ನೇ ಪತ್ರಿಕೆಯಾಗಿ ಸಂಶೋಧನೆ ಮತ್ತು ಪ್ರಕಟಣಾ ನೀತಿಯ ತರಗತಿಗಳನ್ನು ಪ್ರತಿದಿನ ಮಧ್ಯಾಹ್ನ:೩.೩೦ ರಿಂದ ೫.೩೦ರ ವರೆಗೆ ಮಂಟಪ ಸಭಾಂಗಣದಲ್ಲಿ ನಡೆಸಲಾಗುವುದು. ಇದನ್ನು ವೇಳಾಪಟ್ಟಿಯಲ್ಲಿ ಸೇರ್ಪಡಿಸಲು ಕೋರಿದೆ.

ನಾಲ್ಕನೇ ಹಂತದ ಕೋರ್ಸ್‌ವರ್ಕ್ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ದಿನಾಂಕ: ೦೨.೦೩.೨೦೨೪ರಂದು ಮಧ್ಯಾಹ್ನ ೧೨.೦೦ ಗಂಟೆಗೆ ಮಂಟಪ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಎಲ್ಲ ವಿಭಾಗಗಳ ಮುಖ್ಯಸ್ಥರುಗಳು, ಪ್ರಾಧ್ಯಾಪಕರು, ಕೋರ್ಸ್‌ವರ್ಕ್ ವಿದ್ಯಾರ್ಥಿಗಳೊಂದಿಗೆ ಹಾಗೂ ಇತರೆ ಎಲ್ಲ ವಿದ್ಯಾರ್ಥಿಗಳು ಭಾಗವಹಿಸಬೇಕೆಂದು ಕೋರಲು ಮಾನ್ಯರಿಂದ ನಿರ್ದೇಶಿತನಾಗಿದ್ದೇನೆ.

20.2.24

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

**ಇವರಿಗೆ,**

೦೧. ಎಲ್ಲಾ ಅಧ್ಯಯನ ವಿಭಾಗಗಳಿಗೆ - ವಿದ್ಯಾರ್ಥಿಗಳ ಗಮನಕ್ಕೆ ತರುವುದು
೦೨. ಎಲ್ಲಾ ವಿಸ್ತರಣಾ ಕೇಂದ್ರಗಳಿಗೆ - ವಿದ್ಯಾರ್ಥಿಗಳ ಗಮನಕ್ಕೆ ತರುವುದು
೦೩. ಎಲ್ಲಾ ಮಾನ್ಯತಾ ಕೇಂದ್ರಗಳಿಗೆ - ವಿದ್ಯಾರ್ಥಿಗಳ ಗಮನಕ್ಕೆ ತರುವುದು